
# ಬೆಳಕಿನ ಸಂಚಲನ

ಸಂ 3, ಸಂ 5 ಸೆಪ್ಟೆಂಬರ್ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ ಜುಲೈ 5, 1998ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಇಡೀ ಸೃಷ್ಟಿಯ ಹಿಂದೆ ಒಂದು ಮಹಾನ್ ಬುದ್ಧಿಶಕ್ತಿ ಇದೆ ಎಂದು ಹಿಂಜರಿಕೆ ಇಲ್ಲದೆ ನಾವು ಒಪ್ಪಿಕೊಳ್ಳಬೇಕು. ಈ ಮಹಾನ್ ಬುದ್ಧಿಶಕ್ತಿಯನ್ನು ನಾವು ದೇವರು ಅಥವಾ ಬೆಳಕು ಎಂದು ಕರೆಯುತ್ತೇವೆ ಹಾಗೂ ಅವನು, ಪ್ರೀತಿ ಮತ್ತು ಕಾಳಜಿ ತುಂಬಿದ ಪರಿಶುದ್ಧ ಪ್ರಜ್ಞೆ. ದೇವರನ್ನು ಬಹು ಮುಖ್ಯವಾದ ವಾಸ್ತವಾಂಶ ಮತ್ತು ನಮ್ಮ ಜೀವನದಲ್ಲಿ ಬಹು ದಿವ್ಯವಾದ ಇರುವಿಕೆ (Presence) ಎಂದು ಒಪ್ಪಿಕೊಂಡರೆ, ನಾವು ಅವನನ್ನು ಇನ್ನೊಬ್ಬ ವ್ಯಕ್ತಿಯಂತೆ ಯಾವುದೇ ಆಕಾರದಲ್ಲಿ ಅಥವಾ ನಿರಾಕಾರದಲ್ಲಿ, ಬೆಳಕಿನಂತೆ, ಅಥವಾ ನಮ್ಮಲ್ಲಿ ಮತ್ತು ನಮ್ಮ ಸುತ್ತಲೂ ಯಾವಾಗಲೂ ಇರುವ ಇರುವಿಕೆ ಎಂದು ಊಹಿಸಿಕೊಳ್ಳಬಹುದು.

ಈ ವಾಸ್ತವವನ್ನು ನಾವು ಒಪ್ಪಿಕೊಂಡರೆ, ನಮ್ಮನ್ನು ಮತ್ತು ನಮ್ಮ ಆಸಕ್ತಿಗಳನ್ನು ಪೂರ್ಣವಾಗಿ ಅವನ ಕೈಗಳಿಗೆ ಒಪ್ಪಿಸಲು ನಮಗೆ ಬಹಳ ಸುಲಭವಾಗುತ್ತದೆ. ಆಗ ಜೀವನದಲ್ಲಿ ನಾವು ಏನೇ ಆದರೂ ಒಪ್ಪಿಕೊಳ್ಳುತ್ತೇವೆ. ತರುವಾಯ, ನಮ್ಮ ಜೀವನದಲ್ಲಿ ಬರುವ ಎಲ್ಲವನ್ನೂ ಅವನ ಇಚ್ಛೆ, ಅವನ ಉಡುಗೊರೆ ಎಂದು ಒಪ್ಪಿಕೊಳ್ಳುತ್ತೇವೆ. ಈ ಒಪ್ಪಿಗೆ ಬಹಳ ಮುಖ್ಯ. ನಮ್ಮಗಳ ಜೀವನದಲ್ಲಿ ದೇವರು ಅಥವಾ ಬೆಳಕನ್ನು ತರೋಣ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ತನ್ನ ದಿನದ ಬಹು ಉತ್ತಮವಾದ ಸಮಯವೆಂದರೆ ಧ್ಯಾನ ಮಾಡುವಾಗಿನ ಸಮಯವೆಂದು ಒಬ್ಬ ಚಿಕ್ಕ ಹುಡುಗ ಹೇಳಿದ. ಅವನು ತನ್ನೊಂದಿಗೆ ಮತ್ತು ದೇವರ ಜೊತೆ ಇರುವುದು ಆ ಸಮಯದಲ್ಲೇ. ಬೆಳಕನ್ನು ಚಾನಲ್ ಮಾಡುವಾಗ ನಾವು ಬೆಳಕಿನ ಜೊತೆ ಇರುತ್ತೇವೆ. ಹಾಗೂ ಬೆಳಕಿನ ಜೊತೆ ನಾವಿರುವಾಗ, ಸ್ವಾಭಾವಿಕವಾಗಿಯೇ ಅದು ನಮ್ಮ ಜೀವನದ ಅತ್ಯುತ್ತಮ ಸಮಯವಾಗಿರುತ್ತದೆ. ಈ ಸಮಯವನ್ನು ಬೆಳಕನ್ನು ಚಾನಲ್ ಮಾಡಿದ ನಂತರವೂ ಮುಂದುವರೆಸಬಹುದು. ಈ ಬೆಳಕು ನಮ್ಮ ಜೊತೆಯಲ್ಲಿ ಯಾವಾಗಲೂ ಇರಲಿ ಎಂದು ನಾವು ಇಚ್ಛಿಸಿದರೆ ಹಾಗೂ ನಮ್ಮಲ್ಲಿ ಮತ್ತು ನಮ್ಮ ಸುತ್ತಲೂ ಅದರ ಉಪಸ್ಥಿತಿಯ ಅರಿವು ನಮಗಿದ್ದರೆ, ನಾವು ಬೆಳಕಿನ ಜೊತೆ ಯಾವಾಗಲೂ ಇರುತ್ತೇವೆ. ಆಗ ನಮ್ಮ ಕಾರ್ಯಗಳು, ನಮ್ಮ ಭಾವನೆಗಳು ಮತ್ತು ನಮ್ಮ ಆಲೋಚನೆಗಳು ಬೆಳಕಿನ ಜೊತೆ ಶ್ರುತಿಗೊಂಡಿರುತ್ತವೆ. ಹಾಗೂ ನಮ್ಮನ್ನು ತೊಡಗಿಸಿಕೊಂಡಿರುವ ಯಾವುದೇ ಕ್ಷೇತ್ರದಲ್ಲಿ ಅತ್ಯುತ್ತಮವಾದದ್ದು ನಮ್ಮಿಂದ ಹೊರಬರುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಲೈಟ್ ಚಾನಲಿಂಗ್, ಮನುಕುಲಕ್ಕೆ ದೇವರು ಕೊಟ್ಟ ಬಹು ಅಮೂಲ್ಯವಾದ ಉಡುಗೊರೆ. ಶಕ್ತಿಯುತವಾದ ಈ ತಂತ್ರವು ಬಹು ಗೊಂದಲದ ಈ ಅವಧಿಯನ್ನು ಸುಲಭವಾಗಿ ಹಾದುಹೋಗಲು ಸಹಾಯ ಮಾಡುತ್ತದೆ. ಬೆಳಕು ಶಕ್ತಿಯನ್ನು, ವಿವೇಕವನ್ನು ಕೊಡುತ್ತದೆ ಹಾಗೂ ಬಹುಮುಖ್ಯವಾದ ಈ ಸಮಯದಲ್ಲಿ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ನಿಯತವಾದ ಸಾಮೂಹಿಕ ಲೈಟ್ ಚಾನಲಿಂಗ್ ಈ ಪ್ರಪಂಚದ ವಿಧಿಯನ್ನು ಬದಲಾಯಿಸಬಲ್ಲದು. ಬೆಳಕು ಯಾವುದೇ ಬದಲಾವಣೆಯನ್ನು ಹೇರುವುದಿಲ್ಲವಾದರೂ ಅದು ಜನರು ಪರಿವರ್ತನೆಗೊಳ್ಳಲು ಅನುಕೂಲಕರವಾದ ವಾತಾವರಣವನ್ನು ಕಲ್ಪಿಸುತ್ತದೆ. ವೈಯಕ್ತಿಕವಾಗಿ ನಾವು ಬೆಳಕನ್ನು ಆಯ್ಕೆಮಾಡಿಕೊಳ್ಳಬೇಕು ಹಾಗೂ ಬೆಳಕನ್ನು ಸ್ವೀಕರಿಸಿ ಬದಲಾವಣೆಗಳಾಗಲು ಅವಕಾಶ ಮಾಡಿಕೊಡಬೇಕು.

ಲೈಟ್ ಚಾನಲಿಂಗ್‌ನ ಸಂದೇಶವನ್ನು ಹರಡೋಣ ಹಾಗೂ ನಿಯತವಾಗಿ ಬೆಳಕನ್ನು ಹರಡಿ ಬೆಳಕಿನ ಕ್ರಾಂತಿಯ ಭಾಗವಾಗೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:00 - 5:30)
ಮಂಚ್‌ಕಿನ್ಸ್, ನಂ. 890,
38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಶಿಕ್ಷಕರು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪ್ರತಿ ಕ್ಷಣವೂ ಒಂದು ಉಡುಗೊರೆ; ಪ್ರತಿ ಅರುಣೋದಯ, ಪ್ರತಿ ಹೂವು, ಪ್ರತಿ ಪಕ್ಷಿ, ಪ್ರತಿ ಮುಗುಳ್ನಗು ಹಾಗೂ ಪ್ರತಿ ಕಣ್ಣೀರು ನಾವು ಅನುಭವಿಸುವುದಕ್ಕೆ ಹಾಗೂ ವಿಸ್ತಾರಗೊಳ್ಳುವುದಕ್ಕೆ ಇರುವ ಉಡುಗೊರೆ.
- ನಾವು ಶಿಸ್ತನ್ನು ಅದರ ಮೇಲಿನ ಗೌರವದಿಂದಾಗಿ ಪಾಲಿಸಬೇಕೆ ವಿನಹ ಭಯದಿಂದಲ್ಲ.
- ನೋವು ಮತ್ತು ನಲಿವು ನಮ್ಮ ಜೀವನದ ಸ್ವಾಭಾವಿಕ ಭಾಗಗಳು. ನಾವು ಈ ಎರಡನ್ನೂ ಅನುಭವಿಸಿ, ಅವುಗಳನ್ನು ಮೀರಿ ಮೇಲೇರಿದಾಗ ಮಾತ್ರ ಜೀವನ ಪೂರ್ತಿಯಾಗುತ್ತದೆ.
- ನಾವು ಪೂರ್ಣವಾಗಿ ಶರಣಾಗತರಾದಾಗ, ಎಲ್ಲಾ ಕರ್ಮಗಳು ಕೊನೆಗೊಳ್ಳುತ್ತವೆ. ನಾವು ಬೆಳಕಾಗುತ್ತೇವೆ.
- ನಿಮಗೆ ನಿಮ್ಮ ತಪ್ಪಿನ ಅರಿವಾದಾಗ, ನಿಮ್ಮನ್ನು ನೀವು ಕಠೋರವಾಗಿ ಟೀಕಿಸಿಕೊಳ್ಳಬೇಡಿ ಹಾಗೂ ಖಂಡಿಸಿಕೊಳ್ಳಬೇಡಿ. ತೀವ್ರವಾಗಿ ಪಶ್ಚಾತ್ತಾಪ ಪಟ್ಟು ಅದನ್ನು ಪುನಃ ಮಾಡುವುದಿಲ್ಲವೆಂದು ನಿಶ್ಚಯಿಸಿ; ಅದು, ಅದರ ಕರ್ಮಫಲದಿಂದ ನಿಮ್ಮನ್ನು ಮುಕ್ತಗೊಳಿಸುತ್ತದೆ.
- ಪ್ರತಿ ಸಮಸ್ಯೆ ಹಾಗೂ ಪ್ರತಿ ನೋವು ಒಂದು ಪಾಠವನ್ನು ಹೊಂದಿರುತ್ತದೆ. ಆ ಪಾಠವನ್ನು ಕಲಿತ ಮೇಲೆ, ಸಮಸ್ಯೆ ಮತ್ತು ನೋವುಗಳಿರುವುದಿಲ್ಲ.
- ನಾವು ಆಧ್ಯಾತ್ಮಿಕವಾಗಿ ಬೆಳೆದಾಗ, ಜೀವನದ ಪ್ರತಿಯೊಂದು ಅಂಶದಲ್ಲಿ ನಾವು ಬೆಳೆಯುತ್ತೇವೆ. ನಮ್ಮ ಪೂರ್ಣ ವ್ಯಕ್ತಿತ್ವ ಚೆನ್ನಾಗಿ ಪರಿಷ್ಕೃತವಾಗುತ್ತದೆ. ನಮ್ಮ ಪ್ರತಿ ಆಲೋಚನೆ, ಮಾತು ಮತ್ತು ಹಾವಭಾವಗಳು ಪ್ರೀತಿಯಿಂದ ತುಂಬಿರುತ್ತವೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4987 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.28 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಜೀವನ ಮತ್ತು ಬೆಳಕು

ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ

ನಾವು ಈ ಪ್ರಪಂಚಕ್ಕೆ ಬಂದಿರುವುದು ಇಲ್ಲಿನ ಜೀವನವನ್ನು ಅನುಭವಿಸಲು ಎಂದು ಗುರೂಜಿ ಕೃಷ್ಣಾನಂದರವರು ನಮಗೆ ತಿಳಿಸಿದರು. ಇಲ್ಲಿನ ಜೀವನದಲ್ಲಿ ವೈವಿಧ್ಯತೆ ಇದೆ. ಇಲ್ಲಿ ಸೆಣಸಾಟವಿದೆ. ಏನಾದರೂ ಸಾಧಿಸುವುದಕ್ಕೆ ಸೆಣಸಾಡಬೇಕಾಗಿದೆ, ಜೀವನವನ್ನು ನಿಭಾಯಿಸುವುದರಲ್ಲಿ ಸೆಣಸಾಟವಿದೆ. ಈ ಸೆಣಸಾಟವನ್ನು ಅನುಭವಿಸುವುದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಏನಾದರೂ ಸಾಧಿಸಲು ನಾವು ಪ್ರಯತ್ನಗಳನ್ನು ಮಾಡಲೇಬೇಕು. ಪ್ರಯತ್ನ ಮಾಡುವುದರಲ್ಲಿ ಸೊಗಸಿದೆ. ಸೆಣಸಾಟಗಳಲ್ಲೂ ಸೊಗಸಿದೆ ಹಾಗೂ ಸಹಜವಾಗಿಯೇ ನಮ್ಮ ಗುರಿಗಳನ್ನು ಸಾಧಿಸುವುದರಲ್ಲಿ ಹೆಚ್ಚಿನ ಸಂತೋಷವಿದೆ. ಈ ಎಲ್ಲಾ ಅನುಭವಗಳು, ಈ ಪ್ರಪಂಚವನ್ನು ವಾಸಿಸಲು ಆಕರ್ಷಕವಾದ ಸ್ಥಳವನ್ನಾಗಿ ಮಾಡಿವೆ.

ವಿದ್ಯಾರ್ಥಿಗಳಾದ ನಾವು ಕೂಡ ವ್ಯಾಸಂಗದಲ್ಲಿ ಅತಿಶಯಿಸಲು, ಕ್ರೀಡೆಯಲ್ಲಿ ಅತಿಶಯಿಸಲು, ಕಲೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಅಥವಾ ಕೂಲಂಕುಷವಾಗಿ ಅಧ್ಯಯನ ಮಾಡಲು ನಾವು ಆಯ್ಕೆಮಾಡಿಕೊಂಡ ಯಾವುದೇ ಕ್ಷೇತ್ರದಲ್ಲಾಗಲಿ ಅತಿಶಯಿಸಲು ಸೆಣಸಾಡಲೇಬೇಕು. ಸಾಮಾನ್ಯವಾಗಿ ನಮ್ಮ ಸಾಧನೆ ನಮ್ಮ ಪ್ರಯತ್ನಗಳ ತೀವ್ರತೆಗೆ ಅನುಗುಣವಾಗಿರುತ್ತದೆ. ನಮ್ಮ ಗಮನವನ್ನು ಬೇರೆಡೆಗೆ ತಿರುಗಿಸುವ ಅನೇಕ ಹಾದಿಗಳಿರುವಾಗ, ನಾವು ಎಷ್ಟು ಸ್ಪಷ್ಟವಾಗಿ ನಮ್ಮ ಗುರಿಗಳ ಬಗ್ಗೆ ಯೋಚಿಸುತ್ತೇವೆ ಹಾಗೂ ಎಷ್ಟು ಆಸಕ್ತಿಯಿಂದ ಅವುಗಳನ್ನು ಬಿಡದೆ ಬೆಂಬತ್ತಿ ಹೋಗುತ್ತೇವೆ ಎನ್ನುವುದು ಆ ನಿರ್ದಿಷ್ಟ ದಿಕ್ಕಿನಲ್ಲಿನ ನಮ್ಮ ಪ್ರಗತಿಯ ಮೇಲೆ ಮಹತ್ತರವಾದ ಪರಿಣಾಮ ಬೀರುತ್ತದೆ.

ನಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಪ್ರಯತ್ನಗಳನ್ನು ಮಾಡುತ್ತಿರುವಾಗ, ಲೈಟ್ ಚಾನಲಿಂಗ್‌ನ ಸಹಾಯ ಪಡೆಯಬಹುದು. ಚಾನಲಿಂಗ್ ಮಾಡುವಾಗ, ನಮ್ಮ ಸುತ್ತಲೂ ಹಾಗೂ ಕ್ರಮೇಣ ಇಡೀ ಪ್ರಪಂಚಕ್ಕೆ ಬೆಳಕನ್ನು ಹರಡುವ ಮೊದಲು, ಬೆಳಕನ್ನು ಸ್ವಲ್ಪ ಸಮಯ ನಮ್ಮ ಶರೀರದಲ್ಲಿ ಅಂತರ್ಗತ ಮಾಡಿಕೊಳ್ಳಬೇಕು. ಹೀಗೆ ಅಂತರ್ಗತವಾದ ಬೆಳಕು ಅನೇಕ ರೀತಿಯಲ್ಲಿ ನಮಗೆ ಸಹಾಯ ಮಾಡುತ್ತದೆ.

ನಾವು ಓದುತ್ತಿದ್ದರೆ, ಪಠ್ಯವಿಷಯವನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಚೆನ್ನಾಗಿ ಗ್ರಹಿಸಲು ಬೆಳಕು ಸಹಾಯ ಮಾಡುತ್ತದೆ. ಅದು ನಮ್ಮ ಜ್ಞಾಪಕಶಕ್ತಿ ಮತ್ತು ಏಕಾಗ್ರತೆಯನ್ನು ಉತ್ತಮಗೊಳಿಸುತ್ತದೆ. ನಾವು ಕ್ರೀಡೆಗಳ ಮೇಲೆ ಗಮನ ಹರಿಸುತ್ತಿದ್ದರೆ, ಹೆಚ್ಚು ಏಕಾಗ್ರತೆಯಿಂದ ಇರಲು ಬೆಳಕು ಸಹಾಯ ಮಾಡುತ್ತದೆ. ಹೆಚ್ಚು ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಲು ಬೆಳಕು ನಮಗೆ ಸಹಾಯಮಾಡುತ್ತದೆ; ಜೀವನದ ಯಾವುದೇ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಪಡೆಯಲು ಅದು ಅತಿಮುಖ್ಯ. ಬೆಳಕು ನಮ್ಮ ಆಲೋಚನೆಯಲ್ಲಿ ಸ್ಪಷ್ಟತೆಯನ್ನು ತರುತ್ತದೆ; ಇದು ನಮ್ಮ ಗುರಿಗಳನ್ನು ಸ್ಪಷ್ಟವಾಗಿ ನಿರೂಪಿಸಲು ಸಹಾಯ ಮಾಡಬಲ್ಲದು. ಬೆಳಕು ನಮ್ರತೆಯನ್ನು ಬೆಳೆಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ನಮ್ಮ ಜೀವನದ ಪ್ರಾರಂಭಿಕ ಹಂತಗಳಲ್ಲಿನ ಯಶಸ್ಸನ್ನು ನಿಭಾಯಿಸಲು ಅದು ಬಹಳ ಮುಖ್ಯ.

ಇಲ್ಲಿ, ಬೆಳಕಿನ ಎಲ್ಲಾ ಪ್ರಯೋಜನಗಳನ್ನು ಪಟ್ಟಿಮಾಡುವುದು ಕಷ್ಟ. ನಾವು ಎಷ್ಟು ಮನಃಪೂರ್ವಕವಾಗಿ ಹಾಗೂ ತೀವ್ರತೆಯಿಂದ ಅಭ್ಯಾಸ ಮಾಡುತ್ತೇವೆ ಎನ್ನುವುದು ಅತಿಮುಖ್ಯ.

ಮಾನಸ ಫೌಂಡೇಶನ್ನಿನ ಕಾರ್ಯಕರ್ತರು ಈ ಸರಳ ಆದರೆ ಬಹಳ ಮುಖ್ಯವಾದ ತಂತ್ರವನ್ನು ಸಾಧ್ಯವಾದಷ್ಟು ಮಕ್ಕಳಿಗೆ ಪರಿಚಯಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಮಗೆ ನಮ್ಮದೇ ಆದ ಸಂಪನ್ಮೂಲಗಳ ಹಾಗೂ ಸಂಪರ್ಕದ ಇತಿಮಿತಿಗಳಿವೆ. ಆದರೂ ಕೂಡ ಶಾಲಾ ಅಧಿಕಾರಿಗಳ ಬೆಂಬಲದಿಂದ, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಲಕ್ಷಗಟ್ಟಲೆ ಜನರನ್ನು ತಲುಪಲು ನಮಗೆ ಸಾಧ್ಯವಾಗಿದೆ. ಈ ಪ್ರಪಂಚದ ಪ್ರತಿ ಪ್ರಜೆಗೂ ಬೆಳಕಿನ ಅರಿವುಂಟಾಗಲಿ ಹಾಗೂ ಈ ಪ್ರಪಂಚವನ್ನು ಶಾಂತಿ ಮತ್ತು ಸಂಮೃದ್ಧಿಯಿಂದ ಕೂಡಿದ ಹೊಸಯುಗದ ಕಡೆಗೆ ಕೊಂಡೊಯ್ಯಲಿ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನಾನು ಕೆಲಸ ಮಾಡುವ ಆಫೀಸಿನ ಬಾಗಿಲ ಬೀಗವನ್ನು ತೆಗೆಯಲು ನನ್ನ ಸಹೋದ್ಯೋಗಿಯೊಬ್ಬರು ಸುಮಾರು ಒಂದು ಘಂಟೆಯಿಂದ ಪ್ರಯತ್ನಿಸುತ್ತಲೇ ಇದ್ದರೂ ಸಾಧ್ಯವಾಗಲಿಲ್ಲ. ಆಗ ನಾನು ಕೀಲಿ ಕೈ ತೆಗೆದುಕೊಂಡು, 'ನಾನು ಕೀಲಿ ಕೈಯನ್ನು ಬೀಗದಲ್ಲಿ ಇರಿಸುತ್ತೇನೆ, ದಯವಿಟ್ಟು ನೀನು ಬಾಗಿಲು ತೆರೆ' ಎಂದು ಬೆಳಕಿಗೆ ಪ್ರಾರ್ಥಿಸಿದೆ. ನಾನು ಕೀಲಿ ಕೈಯನ್ನು ಬೀಗದಲ್ಲಿ ಇರಿಸಿ ತಿರುಗಿಸಿದ ತಕ್ಷಣ ಆ ಬಾಗಿಲು ತೆರೆದುಕೊಂಡಿತು. ಒಂದು ಘಂಟೆಯಿಂದ ಪ್ರಯತ್ನಿಸಿದರೂ ತೆರೆದುಕೊಳ್ಳದಿದ್ದ ಬಾಗಿಲು ಬೆಳಕಿನ ಅನುಗ್ರಹದಿಂದ ಒಂದು ಸೆಕೆಂಡಿನಲ್ಲಿ ತೆರೆದುಕೊಂಡಿತು! ಅಲ್ಲಿದ್ದ ಪ್ರತಿಯೊಬ್ಬರೂ ಆಶ್ಚರ್ಯಗೊಂಡರು.

ನಾನು ಪ್ರತಿಯೊಂದು ಕೆಲಸವನ್ನು ಸಾಕ್ಷಿಭಾವದಿಂದ ಮಾಡಲು ಪ್ರಯತ್ನಿಸುತ್ತಿದ್ದೇನೆ. 'ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ ಆದರೆ ನೀನೇ ಅದರ ಹಿಂದೆ ಇರುವ ಸ್ಫೂರ್ತಿ' ಎಂದು ಪ್ರತಿಸಲವೂ ನಾನು ಬೆಳಕನ್ನು ಪ್ರಾರ್ಥಿಸುತ್ತೇನೆ. ಈ ರೀತಿ ನಾನು ಪ್ರಾರ್ಥಿಸಿದಾಗ ಯಾವ ತಪ್ಪೂ ಇಲ್ಲದಂತೆ ಕೆಲಸ ಪೂರ್ಣಗೊಳ್ಳುತ್ತದೆ. ಕೆಲಸವನ್ನು ಪೂರ್ತಿ ಮಾಡಲು ಬೇರೆಯವರ ಸಹಾಯ ಬೇಕಾದಾಗ ನನಗೆ ಪೂರ್ಣ ಪ್ರಮಾಣದಲ್ಲಿ ಸಹಕಾರ ದೊರೆಯುತ್ತದೆ ಹಾಗೂ ಶಾಂತಿಯುತವಾಗಿ ಕೆಲಸವಾಗುತ್ತದೆ. ಪ್ರತಿ ಕ್ಷಣದಲ್ಲೂ ನನಗೆ ಬೆಳಕಿನ ಮಾರ್ಗದರ್ಶನದ ಅನುಭವವಾಗುತ್ತದೆ.

ಯಾವುದಾದರೂ ನಕಾರಾತ್ಮಕತೆ ನನ್ನನ್ನು ಪ್ರವೇಶಿಸುವುದಕ್ಕೆ ಪ್ರಯತ್ನಿಸಿದಾಗ, ನಾನು ಎಲ್ಲಾ ಪ್ರಯತ್ನಗಳನ್ನು ಮಾಡಿ ಅದನ್ನು ಹೊರಗಟ್ಟುತ್ತೇನೆ. ಬೆಳಕಿನಲ್ಲಿರುವ ನನ್ನ ನಂಬಿಕೆ ಪ್ರತಿ ಸಲವೂ ನನಗೆ ಸಹಾಯ ಮಾಡುತ್ತದೆ. ನನ್ನ ಜೀವನದ ಪ್ರತಿಯೊಂದು ಸನ್ನಿವೇಶದಲ್ಲೂ ನಾನು ಬೆಳಕಿನ ಸಹಾಯವನ್ನು ಪಡೆಯುತ್ತೇನೆ ಹಾಗೂ ಇದರಿಂದಾಗಿ ನಾನು ಚಿಂತೆಗಳಿಂದ ಮುಕ್ತನಾಗಿದ್ದೇನೆ. ಬೆಳಕಿನ ಸಮೀಪದಲ್ಲಿದ್ದಾಗ ನನಗೆ ಸಂಪೂರ್ಣ ಸುರಕ್ಷತೆಯ ಭಾಸವಾಗುತ್ತದೆ.

–ಸೌರಭ್ ಜೋಶಿ, ಲೈಟ್ ಚಾನಲ್

ಲೈಟ್ ಚಾನಲಿಂಗ್ ಬಹಳ ಪ್ರಿಯವಾಗಿರುವುದರಿಂದ, ನನಗೆ ಈಗ ಭಯವಿಲ್ಲ. ನನ್ನಲ್ಲಿ ಸದ್ಭಾವನೆ ಇದೆ.

–ಧನುಷ್, 6ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಶ್ರಮ ಹಾಗೂ ಏಕಾಗ್ರತೆಯಿಂದ ಓದುವುದಕ್ಕೆ ನನಗೆ ಸಾಧ್ಯವಾಗಿದೆ.

–ತುಷಾರ್, 6ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಲೈಟ್ ಚಾನಲಿಂಗ್ ತುಂಬ ಚೆನ್ನಾಗಿತ್ತು. ನಾನು ಬಣ್ಣಗಳನ್ನು ನೋಡಿದೆ. ನನಗೆ ಅತಿಯಾದ ಸಂತೋಷವಾಯಿತು.

–ಆದೇಶ್, 6ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಲೈಟ್ ಚಾನಲಿಂಗ್ ಮಾಡಿದ ನಂತರ ಈ ಪ್ರಪಂಚ ಹೊಸದರಂತೆ ಹಾಗೂ ಪ್ರಕಾಶಿಸುತ್ತಿರುವಂತೆ ಅನಿಸಿತು.

–ಆರ್ಯಮನ್, 5ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಲೈಟ್ ಚಾನಲಿಂಗ್ ನಂತರ ನನ್ನಲ್ಲಿ ಉಲ್ಲಾಸ ಮೂಡಿತು. ಪ್ರತಿಯೊಬ್ಬರೂ ಸಮಾಧಾನದಿಂದ ಇರುವ ಹಾಗೆ ಮತ್ತು ಅವರಲ್ಲಿ ದೇವರು ನೆಲೆಸಿರುವ ಹಾಗೆ ಅನುಭವವಾಯಿತು.

–ನಿಹಾರಿಕ, 5ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಬಿಳಿ ಬೆಳಕು ಇಡೀ ಪ್ರಪಂಚದೆಲ್ಲೆಡೆ ಹರಡುತ್ತಿರುವುದರ ಸಂತೋಷದಾಯಕ ಅನುಭವವಾಯಿತು.

–ಸನತ್ ಅರವಿಂದ್, 5ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ನನ್ನ ಏಕಾಗ್ರತಾ ಶಕ್ತಿ ಉತ್ತಮಗೊಂಡಿದೆ. ಎಲ್ಲರೂ ಶಾಂತಿಯಿಂದ ಇರುವಂತೆ ಅನುಭವವಾಯಿತು.

–ಅನನ್ಯ, 5ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಜರಗನ ಹಳ್ಳಿಯ ಶ್ರೇಯಸ್ ಪಬ್ಲಿಕ್ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಿಕೊಡುವಾಗ ನನಗೆ ಅತೀವವಾದ ಸಮಾಧಾನ ಮತ್ತು ಚೈತನ್ಯದ ಅನುಭವವಾಯಿತು. ಚೈತನ್ಯಗಳನ್ನು ಮತ್ತು ಆ ಸುಂದರವಾದ ಮಕ್ಕಳು ಬೆಳಕನ್ನು ಚಾನಲ್ ಮಾಡುತ್ತಿರುವುದರಲ್ಲಿ ಆಳವಾಗಿ ತೊಡಗಿರುವುದನ್ನು ಅನುಭವಿಸಲು ನಾನು ಕೆಲವು ಕ್ಷಣ ಸೂಚನೆಗಳನ್ನು ಕೊಡುವುದನ್ನು ನಿಲ್ಲಿಸಿದೆ.

–ಅನಿತಾ ಕೆ.ಎ, ಲೈಟ್ ಚಾನಲಿಂಗ್ ಕಾರ್ಯಕರ್ತೆ

ಎಲ್ಲಾ ಕಡೆಗಳಲ್ಲಿ ಶಾಂತಿ ಮತ್ತು ಪ್ರಕಾಶವಿರುವ ಹಾಗೆ ಹಾಗೂ ನನ್ನ ಜೊತೆ ಪ್ರತಿಯೊಬ್ಬರೂ ಸಂತೋಷದಿಂದ ಇರುವ ಹಾಗೆ ಅನುಭವವಾಯಿತು.

–ಸಾವರ್ಣೆ, 5ನೇ ತರಗತಿ,
ಇನ್‌ಸೈಟ್ ಅಕಾಡೆಮಿ, ಬೆಂಗಳೂರು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ